**ಅಸಲು ದಾವ ಸಂಖ್ಯೆಃ 648/2021**
**ಡಿ.ಡಬ್ಲೂ -1**

**ದಿಃ 16-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ವಾದಿಪರ ವಕೀಲರಾದ ಶ್ರೀ SGK ರವರಿಂದಃ-**

ನಾನು 2003 ನೇ ಇಸವಿಯಿಂದ ವಕೀಲ ವೃತ್ತಿ ನಡೆಸುತ್ತಿದ್ದೇನೆ. ನಾನು ಸಿವಿಲ್ ದಾವೆಗಳನ್ನು ನಡೆಸುತ್ತೇನೆ. ನಾನು ವಾದ ಪತ್ರವನ್ನು ಓದಿರುತ್ತೇನೆ. ವಾದ ಪತ್ರದಲ್ಲಿ ಈ ದಾವೆಯ ಮೌಲ್ಯವನ್ನು 2,000/- ರೂ ಗಳೆಂದು ತೋರಿಸಲಾಗಿದೆ ಎಂದರೆ ಸಾಕ್ಷಿ ಸದರಿ ಮೌಲ್ಯ ಮಾಪನ ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ದಾವಾ ಸ್ವತ್ತು 15,00,000/- ಮೌಲ್ಯದ್ದು ಆಗಿರುತ್ತದೆ ಎಂದು ಎಲ್ಲಿಯೂ ಬರೆದಿರುವುದಿಲ್ಲ ಎಂದರೆ ಸರಿ. ದಾವೆಯನ್ನು 1ನೇ ವಾದಿಯ ಪತಿಗೆ ದಾವಾ ಸ್ವತ್ತನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ ಎಂದು ಸಲ್ಲಿಸಲಾಗಿದೆ ಎಂದರೆ ಸರಿ ಆದರೆ ಸದರಿ ವಿಚಾರ ತಪ್ಪಾಗಿರುತ್ತದೆ. ವಾದಿಯರು ನಮ್ಮ ಪರವಾಗಿ ಯಾವುದೇ ದಾಖಲೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ವಾದಿಯರು ನಮಗೆ ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಎಂದಿಗೂ ಅನುಮತಿ ನೀಡಿರುವುದೆ ಇಲ್ಲ ಎಂರದೆ ಸಾಕ್ಷಿ ದಾವಾ ಸ್ವತ್ತು ವಾದಿಗೆ ಸೇರಿರುವುದಿಲ್ಲ ಆದ್ದರಂದ ಅವರು ಅನುಮತಿ ನೀಡುವ ಪ್ರಶ್ನೆ ಉದ್ಭವವಾಗುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಕಟ್ಟಡ ಕಟ್ಟಿದಾಗ ಅದರ ಕುರಿತು ಕಟ್ಟಡ ಪೂರ್ಣಗೊಂಡ ಬಗ್ಗೆ ಪ್ರಮಾಣ ಪತ್ರವನ್ನು ನಾನು 2021-2022 ರಲ್ಲಿ ಪಡೆದಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು 2021-2022 ರಲ್ಲಿ ಪಡೆದಿರುತ್ತೇನಾ ಅಥವಾ 2022-2023 ರಲ್ಲಿ ಪಡೆದಿರುತ್ತೇನಾ ಎಂದರೆ ಸಾಕ್ಷಿ ತನಗೆ ನಿಖರವಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ಹೂಡುವ ಸಮಯದಲ್ಲಿ ಕಟ್ಟಡ ಕೆಲಸ ನಡೆಯುತ್ತಿತ್ತಾ ಎಂದರೆ ಸಾಕ್ಷಿ ಕಟ್ಟಡ ಕೆಲಸ ಪೂರ್ಣಗೊಂಡಿತ್ತು ಎಂದು ನುಡಿಯುತ್ತಾರೆ. ಕಟ್ಟಡ ಕೆಲಸ ಚಾಲ್ತಿಯಲ್ಲಿತ್ತು ಎಂಬ ಕಾರಣಕ್ಕೆ ಈ ದಾವೆಯಲ್ಲಿ ವಾದಿಯರು ಕಟ್ಟಡ ಕೆಲಸವನ್ನು ಮುಂದುವರೆಸಬಾರದೆಂದು ಕೋರಿ ಮದ್ಯಂತರ ಅರ್ಜಿ ಸಲ್ಲಿಸಿದ್ದರು ಎಂದರೆ

ಸರಿ. 3ನೇ ಪ್ರತಿವಾದಿಯು 4ನೇ ಪ್ರತಿವಾದಿಯ ಹೆಸರಿಗೆ 2007 ನೇ ಇಸವಿಯಲ್ಲಿ ಮಾಡಿಕೊಟ್ಟಿರುವ ಕ್ರಯ ಪತ್ರವು ವಾದಿಯರ ಮೇಲೆ ಬಾದ್ಯತೆ ಹೊಂದಿರುವುದಿಲ್ಲ ಎಂದು ಕೇಳಿ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಅದೇ ರೀತಿ ದಿನಾಂಕಃ 10-10-2019 ರಂದು ನನ್ನ ಹೆಸರಿಗೆ ಆಗಿರುವ ಕ್ರಯ ಪತ್ರವು ಸಹ ವಾದಿಯರ ಮೇಲೆ ಬಾದ್ಯತೆ ಹೊಂದಿರುವುದಿಲ್ಲ ಎಂದು ಈ ದಾವೆಯಲ್ಲಿ ಕೇಳಿರುತ್ತಾರೆ ಎಂದರೆ ಸರಿ. ವಾದಿಯರು ಸದರಿ ದಾಖಲೆಗಳನ್ನು ಬರೆದುಕೊಟ್ಟಿಲ್ಲದ ಕಾರಣ ಸದರಿ ದಾಖಲೆಗಳ ಕುರಿತು ನ್ಯಾಯಾಲಯ ಶುಲ್ಕ ಕಟ್ಟುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿ ವಾದಿಯರಿಗೆ ಸೇರದ ಕಾರಣ ಅವರು ಅದರ ಕುರಿತು ದಾಖಲೆ ಬರೆದುಕೊಡುವ ಅಥವಾ ನ್ಯಾಯಾಲಯ ಶುಲ್ಕ ಕಟ್ಟುವ ಪ್ರಶ್ನೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಕಾನೂನು ಬಾಹಿರವಾಗಿ ಕಟ್ಟಡ ಕಟ್ಟಿರುತ್ತೇನೆ ಎಂಬ ಕಾರಣಕ್ಕೆ ಅದನ್ನು ಕೆಡವಿ ಹಾಕುವ ಆದೇಶ ಕೋರಿ ನಿರ್ಬಂದಕಾಜ್ಞೆ ಆದೇಶವನ್ನು ಸಹ ವಾದಿಯರು ಕೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೋಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯಕ್ಕೆ ಈ ದಾವೆ ತೀರ್ಮಾನ ಮಾಡುವ ಅಧಿಕಾರ ಇರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

Sd/-

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**